Alleged Caste distinction in the Maternity Ward, Chitaldrug District Hospital.

*ಪ್ರಶ್ನೆ 68.—ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಚಿತ್ರದುರ್ಗದಲ್ಲಿರುವ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ (ಹೆರಿಗೆ ವಾರ್ಡೂ ಸೇರಿ) ಎಲ್ಲ ನೌಕರರುಗಳ (ಜವಾನರುಗಳನ್ನು ಬಿಟ್ಟು ಇತರ ಎಲ್ಲ ನೌಕರರುಗಳ) ಹೆಸರುಗಳೂ ಮತ್ತು ಹುದ್ದೆಯ ಹೆಸರುಗಳೂ ಏನು ಮತ್ತು ಅವರುಗಳು ಈಗಿರತಕ್ಕ ಸ್ಥಾನಗಳಲ್ಲಿ ಎಷ್ಟು ಕಾಲದಿಂದ ಇದ್ದಾರೆ;

(b) ವೈದ್ಯ ಇಲಾಖೆಯ ಒಬ್ಬ ನೌಕರನು ಒಂದು ಸ್ಥಳದಲ್ಲಿ ಇದ್ದು ಕೆಲಸ ಮಾಡಲು ಕಾಲದಪರಿಮಿತಿಯೇನಾದರೂ ಇದೆಯೆ;

(c) ಲೇಡಿ ಡಾಕ್ಟರವರಾದ ಶ್ರೀಮತಿ ಕಣ್ಣಮ್ಮನವರೂ ಮತ್ತು 'ಮಿಡ್‌ವೈಫ್' ಆಗಿರುವ ಶ್ರೀಮತಿ ಎಸ್. ಸುಬ್ಬಮ್ಮನವರೂ, ಹೆರಿಗೆ ವಾರ್ಡಿನಲ್ಲಿ ಕೋಮು ಸಂಬಂಧದ ಪಕ್ಷಪಾತವನ್ನು ತೋರಿಸುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೆ;

(d) ಹೆರಿಗೆ ವಾರ್ಡುಗಳಲ್ಲಿ, ಒಂದು ಮೂಲೆಯಲ್ಲಿ ಯಾರಾದರೂ ರೋಗಿಗಳು ಇದ್ದಲ್ಲಿ ಅಂಥವರುಗಳನ್ನು ಬೇರೆ ಕಡೆಗೆ ಸಾಗಿಸಿ, ಹೆರಿಗೆ ವಾರ್ಡುಗಳಿಗೆ ಹೋಗತಕ್ಕ ಹರಿಜನರ ಗರ್ಭಿಣಿ ಹೆಂಗಸರುಗಳನ್ನು ಪ್ರತ್ಯೇಕವಾಗಿ ಒಂದು ಮೂಲೆಯಲ್ಲಿ ಸೇರಿಸುತ್ತಿರುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಉತ್ತರ.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—

(a) ಪರಿಶಿಷ್ಟದಲ್ಲಿ ಕೊಟ್ಟಿರತಕ್ಕ ತಖ್ತೆಯನ್ನು ದಯೆಯಿಟ್ಟು ನೋಡಿ.

(b) ಸಾಮಾನ್ಯವಾಗಿ ಮೂರು ವರ್ಷಗಳು.

(c) ಇಲ್ಲ.

(d) ಅಂಥ ಯಾವ ಪಕ್ಷಪಾತವನ್ನೂ ಮಾಡುತ್ತಿಲ್ಲ.

ಪರಿಶಿಷ್ಟ

[ಚುಕ್ಕೆಯ ಗುರುತು ಹಾಕಿರತಕ್ಕ 68ನೆಯ ಪ್ರಶ್ನೆಯ (a) ಭಾಗಕ್ಕೆ ಕೊಟ್ಟಿರತಕ್ಕ ಉತ್ತರವನ್ನು ದಯೆಯಿಟ್ಟು ನೋಡಿ.]

(a) ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿ.

ಸಂ	ಹೆಸರು	ಹುದ್ದೆಯ ಹೆಸರು	ಚಿತ್ರದುರ್ಗದಲ್ಲಿ ಯಾವ ತಾರೀಖಿನಿಂದ ಕೆಲಸ ಮಾಡುತ್ತಿರುವರು
1	ಮೇಜರ್ ಕೆ. ಕೃಷ್ಣರಾಯರು ...	ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು	27—7—1949
2	ಶ್ರೀ ಪಿ. ಎ. ರಾಮರಾಯರು ...	ರೆಸಿಡೆಂಟ್ ಮೆಡಿಕಲ್ ಆಫೀಸರು	3—2—1950
3	,, ಜಿ. ರಾಘವೇಂದ್ರರಾಯರು ...	IIನೆಯ ತರಗತಿಯ ಅಸಿಸ್ಟೆಂಟ್ ಸರ್ಜನ್‌ರು.	8—3—1945
4	,, ಎಚ್. ಕೆ. ಶ್ರೀನಿವಾಸರಾಯರು ...	ಡಿಟೋ	5—6—1950
5	,, ಪಿ. ನರಸಪ್ಪನವರು ...	ಡಿಟೋ	30—8—1950
6	,, ಎಚ್. ಎಸ್. ಉಮಾಪತಯ್ಯನವರು ...	ಡಿಟೋ	1-12—1950
7	ಶ್ರೀಮತಿ ಟಿ. ಕಣ್ಣಮ್ಮನವರು ...	ಲೇಡಿ ಮೆಡಿಕಲ್ ಆಫೀಸರು	1—9—1948
8	,, ಜಯಮ್ಮ ಕನಗರಾಯನ್ ಅವರು ...	IIನೆಯ ತರಗತಿಯ ಲೇಡಿ ಅಸಿಸ್ಟೆಂಟ್ ಸರ್ಜನ್‌ರು.	9—6—1949
9	,, ಡಿ. ಬ್ರೌನ್ ಅವರು ...	Iನೆಯ ದರ್ಜೆಯ ನರ್ಸ್	2-12—1950
10	,, ನರೋಜಿನಿ ಸಿಂಗಾರವೇಲು ಅವರು	IIನೆಯ ದರ್ಜೆಯ ನರ್ಸ್	6—5—1948
11	ಶ್ರೀ ಡಿ. ಎಂ. ಬಾಲಸುಂದರಂ ಅವರು ...	ಡಿಟೋ	16-11—1945
12	,, ನಡ್. ದೇವಾನಂದಂ ಅವರು ...	ಡಿಟೋ	10-10—1945
13	ಶ್ರೀಮತಿ ಲಿಯೋನ್ ರಾಜಂರವರು ...	ಡಿಟೋ	30—8—1950
14	,, ವೈ. ಮಾರ್ಥಮ್ಮನವರು ...	ಡಿಟೋ	14—6—1943
15	ಶ್ರೀ ಕೆ. ಎಸ್. ರಾಮಚಂದ್ರರಾಯರು ...	ಕಾಂಪೌಂಡರು	27-12—1946
16	,, ಎನ್. ಆರ್. ಕೃಷ್ಣಮೂರ್ತಿ ಅವರು ...	ಡಿಟೋ	23-10—1949
17	ಶ್ರೀಮತಿ ಪದ್ಮಾವತಮ್ಮನವರು ...	ಡಿಟೋ	13-10—1948
18	,, ಆರ್. ಸುಬ್ಬಮ್ಮನವರು ...	ರೆಸಿಡೆಂಟ್ ಮಿಡ್‌ವೈಫ್	16—6—1949
19	,, ಎ. ರಾಜಮ್ಮನವರು ...	ಟೌನ್ ಮಿಡ್‌ವೈಫ್	31-10—1950
20	,, ಪಿ. ಅನುಸೂಯಮ್ಮನವರು ...	ರಿಲೀವಿಂಗ್ ಮಿಡ್‌ವೈಫ್	20—9—1950
21	ಶ್ರೀ ಜಿ. ರುದ್ರಪ್ಪನವರು ...	Iನೆಯ ಡಿವಿಜನ್ ಕ್ಲಾರ್ಕ್	27-11—1950
22	,, ಬಿ. ಎನ್. ಸುಬ್ಬರಾಯರು ...	IIನೆಯ ಡಿವಿಜನ್ ಕ್ಲಾರ್ಕ್	29—1—1945
23	,, ಸುಗುಣರಾಜ್ ಅವರು ...	ಡಿಟೋ	13-12—1950

ಶ್ರೀ ಟಿ. ಹನುಮಯ್ಯನವರು.—"Whether there is any time limit for an official in the Medical Department for retention at a place" ಎಂದು ನಾನು ಕೇಳಿರತಕ್ಕ ಪ್ರಶ್ನೆಗೆ "generally three years" ಎಂದು ಉತ್ತರ ಕೊಟ್ಟಿದ್ದೀರಿ. ಹಾಗಾದಮೇಲೆ 3 ವರ್ಷಗಳಿಗಿಂತಲೂ ಮೇಲಾಗಿರತಕ್ಕವರನ್ನು ಅದೇ ಸ್ಥಳದಲ್ಲಿ ಏತಕ್ಕೆ ಇಟ್ಟಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—'ಸಾಧಾರಣವಾಗಿ ಮೂರು ವರ್ಷಗಳು' ಎಂದು ಹೇಳಿರುತ್ತೆ. ದಕ್ಷರಾಗಿ ವಿಶ್ವಾಸ ಜನರ ವಿಶ್ವಾಸವನ್ನು ಹೆಚ್ಚು ಗಳಿಸಿರತಕ್ಕಂಥವರು ಕೊಂಚಕಾಲ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಇರುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಜನರ ವಿಶ್ವಾಸಿಗಳಾಗಿದ್ದರೆಂಬುದನ್ನು ಯಾವ ಆಧಾರದ ಮೇಲೆ ನಿರ್ಧರಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಮ್ಮಂಥವರು ಒಂದು ಹೇಳುತ್ತಿರುವದೇ ಆಧಾರ.

ಶ್ರೀ ಟಿ. ಹನುಮಯ್ಯನವರು.—ಯಾರು ಹಾಗೆ ಜನರ ವಿಶ್ವಾಸಗಳಿಸಿರುತ್ತಾರೆಂಬ ಬಗ್ಗೆ ಅವರ ಹೆಸರನ್ನು ದಯವಿಟ್ಟು ತಿಳಿಸಲಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಜನರಲ್ ಆಗಿ ಯಾರ್ಯಾರು ಪಾಪ್ಯುಲರ್ ಆಗಿರುತ್ತಾರೋ ಅಂಥವರನ್ನು ರೀಜೇನ್ ಮಾಡಿಕೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ನನ್ನ (ಸಿ) ಪ್ರಶ್ನೆಗೆ 'No' ಎಂದು ಉತ್ತರ ಕೊಟ್ಟಿದ್ದೀರಿ. ಈ ಬಗ್ಗೆ ತಾವೇ ನಾವಾದರೂ ವರದಿಯನ್ನು ತರಿಸಿಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಥಾದ್ದು ಯಾವುದೂ ಇಲ್ಲವೆಂಬುದಾಗಿ ತಿಳಿದು ಬಂತು. ಇದು ಕೇವಲ ಸಣ್ಣ ವಿಚಾರ.

ಶ್ರೀ ಟಿ. ಹನುಮಯ್ಯನವರು.—ಆ ರೀತಿಯಾಗುತ್ತಿಲ್ಲ ಎಂಬುದನ್ನು ತಾವು ಯಾರಿಂದ ತಿಳಿದುಕೊಂಡಿರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳನ್ನೂ ಮತ್ತು ಆಜೂಬಾಜೂ ಇರತಕ್ಕ ಜನಾನಗೀ ಜನರನ್ನು ಕೇಳಿ ತಿಳಿದುಕೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಚಿತ್ರದುರ್ಗದ ಡಿಸ್ಪೆನ್ಸರಿ ಹಾಸ್ಪಿಟಲ್‌ನಲ್ಲಿ ಡಾಕ್ಟರುಗಳು ಕೋಮುವಾರು ಭಾವನೆ ತೋರಿಸುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಸಾಧಾರಣವಾಗಿ ಮೂರು ವರ್ಷಗಳ ಕಾಲಕ್ಕಿಂತ ಮೇಲಾಗಿರತಕ್ಕವರು, ಆರು ವರ್ಷಗಳಾಗಿ ಇರತಕ್ಕಂಥವರನ್ನೆಲ್ಲಾ ಇಲ್ಲಿಂದ ವರ್ಗಮಾಡುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ವಿಚಾರ ಮಾಡುತ್ತೇನೆ. ಈ ಬಗ್ಗೆ ಸೀನಿಯರ್ ಸರ್ಜನ್‌ರವರಿಗೆ ವಿಚಾರ ತಿಳಿಸಲಾಗುತ್ತೆ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿ ಆಡಳಿತ ವಿಚಕ್ಷಣೆ ಸಹ ಸರಿಯಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿ ಈಗ ಒಂದು ರೂಪಾಯಿ ಲಂಚ ಕೊಟ್ಟಾಗ್ಯೂ ಸಹ ತೆಗೆದುಕೊಳ್ಳುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದು ನಿರಾಧಾರವಾದ ದೂರು.

ಶ್ರೀ ಟಿ. ಹನುಮಯ್ಯನವರು.—ಇದೇ ವಿಚಾರವಾಗಿ ಈ ಮಾನ್ಯ ಸಭೆಯ ಸದಸ್ಯರೊಬ್ಬರು ಸೀನಿಯರ್ ಸರ್ಜನ್‌ರವರ ವಿಚಾರದಲ್ಲಿ ಒಂದು ಬಿಕರಿಂಗ ಹೇಳಿಕೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಆ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಕೈಗೊಂಡಿದ್ದೇವೆ. ಒಂದು ಪ್ರೆಸ್ ನೋಟ್ ಸಹ ಈ ಬಗ್ಗೆ ಹೊರಡಿಸಲಾಗಿದೆ.

Purchase of D. D. T. during 1949-50 and 1950-51.

*Q.—174. **Sri Kadidal MANJAPPA** (Shimoga-District—General).—

Will the Government be pleased to state :—

(*a*) the total quantity and the cost of D. D. T. purchased during the year 1949-50 and 1950-51 ;

(*b*) the concern from which the D. D. T. is being purchased ;

(*c*) the person or authority who purchased the D. D. T. ?

The Hon'ble Sri K. T. BHASHYAM (Minister for Law and Labour).—

(*During 1949-50 for 9 months.*)

(*a*) 31 tons—916 lbs. D.D.T. at a cost of Rs. 1,76,884-4-8 ; 26 tons of Geigy's wettable powder—cost Rs. 1,27,400 ; Torch-brand D.D.T. 1,040 gallons at a cost of Rs.26,754-10-0.

During 1950-51

Ten and a quarter tons of D.D.T. during 1950-51 at a cost of Rs. 50,609-12-8.

(*b*) (1) Director-General of Disposals.

(2) Messrs. Geigy Insecticides, Ltd., Bombay.

(3) Imperial Chemical Industries (India), Ltd., Bombay.

(4) Progressive Chemical Corporation, Ltd., Bombay.

(*c*) Secretary, Stores Purchase Committee, as regards the firms and direct purchase as regards Government of India.